''ರೊಕ್ಕಾ...'' ಅಂತೇನೋ ಕ್ಷೀಣವಾಗಿ ನುಡಿದ. ''ರೊಕ್ಕದ ಕಾಳಜಿ ನಿಮಗ ಬ್ಯಾಡ. ಪ್ರತಿತಿಂಗಳು ಎಂಟು ಸಾವಿರ ಖರ್ಚು ಬರತದ. ಪಲ್ಲೂ ತಾನೇ ಕೊಡ್ತೇನಂದಾನೆ. ನನ್ನ ತಮ್ಮಗ ಇದೇನು ಮಹಾ ರಖಮು? ಲಕ್ಷ್ಮಿ ಕಾಲು ಮುರಿದುಕೊಂಡು ಬಿದ್ದಾಳ ಅವನ ಮನ್ಯಾಗ'' ಮಾತು ನಿಮ್ಮಿಯ ಬಾಯಲ್ಲಿ ಎತ್ತೆತ್ತೋ ಹೊರಳಾಡುತ್ತಾ ಸಾಗಿತ್ತು.

ಕೇಶವ ಮೌನವಾಗಿ ಕಣ್ಮುಚ್ಚಿ ಕುಳಿತಿದ್ದನೆಷ್ಟೋ ಹೊತ್ತು. ಖಡಲ್ ಖಟ್ ಎಂಬ ಸದ್ದಿಗೆ ಬೆಚ್ಚಿ ಕಣ್ತೆರೆದು ನೋಡಿದರೆ ಹೊಲದ ಶೇಂಗಾಚೀಲ ಇಡಲು ಬಂದಿದ್ದ ರೈತ ಶಂಕರ ಮಾವಿನ ಟೊಂಗೆ ಮುರಿಯುತ್ತಿದ್ದಾನೆ.

''ಲೇ ಶಂಕ್ರ್ಯಾ ತಲಿ ನೆಟ್ಟಗದನೋ ಇಲ್ಲೋ? ಟೊಂಗಿ ಯಾಕಲೇ ಮುರೀಲಿಕ್ಹತ್ತಿ?'' ಎಂದವನೇ ಕೈಗೆ ಸಿಕ್ಕ ಕಟಿಗೆಯೊಂದನ್ನು ಹಿಡಿದು ಧಾವಿಸಿದ್ದ ಅವನ ಕಡೆಗೆ. ''ಅಯ್ಯಯ್ಯಪ್ಪಾ ತಡ್ರಿ ತಡ್ರಿ, ಅಪ್ಪಾರ ಹೊಡೀಬ್ಯಾಡರಿ; ನಾನೇನು ಮಾಡ್ಲಿ ಅವ್ವಾರs ಕಡೀಲಿಕ್ಕೆ ಹೇಳ್ಯಾರ'' ಅಂದವನೇ ಟಣ್ಣನೆ ಮೇಲಕ್ಕೆ ಜಿಗಿದು ಮೇಲಿನ ಟೊಂಗೆಯೇರಿ ಕುಳಿತ.

ಕೇಶವನ ಪಿತ್ತ ಒಮ್ಮೆಲೆ ನೆತ್ತಿಗೇರಿತ್ತು. ''ನಿಮ್ಮಿ ಏ ನಿಮ್ಮಿ ನಿನಗ್ಯಾರು ಹೇಳವರು ಕೇಳವರು ಇಲ್ಲೇನು? ನಾ ಸತ್ತಿಲ್ಲ ಇನ್ನೂ ಜೀವಂತ ಇದ್ದೇನಿ. ಇಂಥಾದ್ದೊಂದು ಕೆಲಸಾ ಮಾಡೋ ಮುಂದ ನನ್ನೂ ಒಂದು ಮಾತು ಕೇಳಬೇಕು ಅನ್ನಿಸಲಿಲ್ಲ ನಿನಗೆ?''

''ಅಯ್ಯ ಏನು ದೊಡ್ಡ ವಿಷಯ ಅಂತ ಇಷ್ಟು ಬಾಯಿ ಮಾಡ್ತೀರಿ. ದಿನಾ ಅಂಗಳದ ತುಂಬ ಬೀಳೋ ಕಸಕಡ್ಡಿ ಯಾರು ಉಡುಗೋರು? ಮರಕ್ಕ ಒಂದು ಹಣ್ಣಿಲ್ಲ ಕಾಯಿಲ್ಲ ಒಣಗಿ ಕೊಡ್ಡಾಗೇದ. ತಗೊಂಡು ಏನು ಮಾಡೋದು ಅದನ್ನ? ಶಂಕರನ ಮನಿ ಉರುವಲರೇ ಆಗಿಹೋಗಲಿ ಅತ್ಲಾಗ'' ಅಂದವಳು ಅರೆಕ್ಷಣ ನಿಂತು, ''ನಿನ್ನೆ ಶ್ರಾವೂನ ಮೈಮ್ಯಾಲ ಒಣಗಿದ ಟೊಂಗಿ ಬೀಳತಿತ್ತು. ದೇವರ ದಯಾ, ಗಳಿಗ್ಯಾಗ ತಪ್ಪಿತು. ಇಕೀ ಹೊಸ್ತಿಲೊಳಗ ಕಾಲಿಟ್ಟಳು ಅಲ್ಲಿ ಕೊಂಬಿ ಛಟಲ್ ಅಂತು ಗೊತ್ತದೇನು ನಿಮಗ?''

ಮಗಳು ಶ್ರಾವಣಿಯ ಮಾತು ಥಾಲಂತೆ ಕೆಲಸ ಮಾಡುತ್ತದೆ ಅಂತ ಬಲ್ಲ ಚತುರೆ ಅಲ್ಲವೆ ಅವಳು? ಸಿಟ್ಟೇರಿದಿದ್ದರೂ ಯಾಕೋ ದುಃಖವಾಗಿತ್ತು ಕೇಶವನಿಗೆ. ಈಗ ಒಣಗಿ ನಿಂತಿದ್ದರೂ ವರ್ಷ ವರ್ಷ ಹಣ್ಣಿನ ರಸಧಾರೆಯುಣಿಸಿ ಹಣ್ಣಿಲ್ಲದ ದಿನಗಳಲ್ಲೂ ತಂಗಾಳಿ ತೀಡಿ ಸುಖ ಕೊಟ್ಟ ಮರದ ಬಗ್ಗೆ ಏನೂ ಅನ್ನಿಸೋದಿಲ್ಲೇನು ಇಕೀಗೆ? ನಮ್ಮಪ್ಪ ನಾ ಹುಟ್ಟಿದ ದಿನವೇ ರಸರಸೀತ ಆಪೂಸು ಹಣ್ಣನ್ನು ಗೊರಟೆ ಸಮೇತ ಅಂಗಳದಲ್ಲಿ ಹುಗಿದು ಬಂದೇ ಅವ್ವನನ್ನು ಕಾಣಲು ಬಾಣಂತಿ ಕೋಣೆಗೆ ಹೋಗಿದ್ದಂತೆ. ''ನೋಡು ಈ ಕೂಸು, ಈ ಮಾವು ಎರಡೂ ನಾ ಹಚ್ಚಿದ ಸಸಿಗಳೇ. ನನ್ನ ಪ್ರೀತಿ, ಕಾಳಜಿಗೆ ಇಬ್ಬರೂ ಸಮಪಾಲರು. ನೋಡೋಣ ರುಕ್ಕು ನಿನ್ನ ಮಗ ಹೆಚ್ಚು ಛಂದ ಬೆಳೀತಾನೋ ಈ ಸಸೀನೋ?'' ಅಂತ ತಲೆ ಸವರಿ ನಕ್ಕಿದ್ದರಂತೆ. ಆ ಸಸಿ ಗಿಡವಾಗಿ ಮರವಾಗಿ ಚಿಗಿತು ಫಲಿತು ಸಾವಿರಾರು ಜನರಿಗೆ ಕಲ್ಲುಸಕ್ಕರೆಯಂಥಾ ಹಣ್ಣುಣಿಸಿ ತಾಯ ಸೆರಗಂಥಾ ತಣ್ಣೆಲಳು ಹಾಸಿ ತಾಪ ಕಳೀತು. ನಾ ಏನು ಮಾಡಿದೆ? ಉದ್ದಕ್ಕ ಕಲಿತೆ. ಹೊಟ್ಟೆ ತುಂಬಿಕೊಳ್ಳಲು ಹಿಡಿದ ನೌಕರಿಗೆ ಮುಂದೆ ಪ್ರೊಫೆಸರ್ ಗಿರಿ, ವಿಶ್ವವಿದ್ಯಾಲಯದ ಸೆನೆಟ್ ಸದಸ್ಯ ಇತ್ಯಾದಿ ಏನೇನೋ ಪುಕ್ಕ ಹಚ್ಚಿಕೊಂಡು ದೊಡ್ಡ ಕಸರತ್ತೇನೋ ಎಂಬಂತೆ ಬೀಗುತ್ತಾ ಯಾವುದೋ ಟೊಳ್ಳು ಬದುಕು ಬದುಕುತ್ತಾ... ಯಾಕೋ ಒಮ್ಮೊಮ್ಮೆ ಎಲ್ಲ ರೇಜಿಗೆಯಾಗಿಬಿಡುತ್ತದವನಿಗೆ. ಅಪ್ಪ ಹೇಳಿದ ಬೆಳವಣಿಗೆ ಇದಲ್ಲವೇ ಅಲ್ಲ ಅಂತ ದಿನಗಳೆದಂತೆ ಪಕ್ಕಾಗತೊಡಗಿದಾಗ ಅಸ್ವಸ್ಥನಾಗುತ್ತಾನೆ. ಆದರೆ, ''ನಮ್ಮಪ್ಪ ಹಚ್ಚಿದ ಮರ'' ಅಂತ ಅವ ಅಭಿಮಾನದಿಂದ ಹೇಳಿಕೊಂಡಷ್ಟೂ ಅದನ್ನು ಕಡಿದೊಗೆವ ನಿಮ್ಮಿಯ ಜಿದ್ದೇಕೆ ಹೆಚ್ಚಾಗುತ್ತದೆ? ಅನ್ನೋ ಪ್ರಶ್ನೆ ಮಾತ್ರ ಸದಾ ಕೊರೆಯುತ್ತದೆ ಅವನನ್ನು. ಮರವೊಂದೇ ಅಂತಲ್ಲ ಅಜ್ಜಿ ಹಾಕಿದ